# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆಃ 2870/2022

**ಸಾಕ್ಷಿಯನ್ನು ದಿಃ 05.08.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಮಾದೇಗೌಡ ಕೆ.ಎಮ್ | ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಮಾದೇಗೌಡ | |
| ವಯಸ್ಸು | 67 ವರ್ಷ | |
| ಕೆಲಸ | ನಿವೃತ್ತ ಎ.ಎಸ್.ಐ | |
| ವಾಸಸ್ಥಳ | ಹುಣಸೂರು | |

## ಮುಖ್ಯ ವಿಚಾರಣೆಃ ಸಿ.ಆರ್.ಪಿ.ಸಿ. ಕಲಂ 299 ರ ಅಡಿ ಮಾನ್ಯ ಸಸಅ ರವರಿಂದಃ

ನಾನು 2013 ರಿಂದ 2015 ರ ವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿಃ 02.01.2014 ರಂದು ನಾನು ಹಾಗೂ ಚಾಸಾ-3, 2 ರವರು ರಾತ್ರಿ ಗಸ್ತಿನಲ್ಲಿ ಇದ್ದಾಗ ರಾತ್ರಿ ಅದರಂತೆ ನಾವು 11 ಗಂಟೆ ಸಮಯದಲ್ಲಿ ಇಲಾಖಾ ಜೀಪ್ ಸಂ.ಕೆಎ 09 ಜಿ 297 ರಲ್ಲಿ ಗಸ್ತಿಗೆ ಹೊರಟು ಬಜಾರ್ ರಸ್ತೆ ಕಡೆ ಗಸ್ತು ಮಾಡಿ ದರ್ಗಾ ರಸ್ತೆ ಕಡೆ ಹೋದಾಗ 12.30 ರ ಸಮಯ ಚಿಕ್ಕಹುಣಸೂರು ಸರಕಾರಿ ಶಾಲೆ ಮುಂಭಾಗ ಒಂದು ಟೆಂಪೋ ನಿಲ್ಲಿಸಿಕೊಂಡು 4 ಜನ ಹುಡುಗರು ಒಂದು ಎಮ್ಮೆಯನ್ನು ಬಲವಂತವಾಗಿ ಗೂಡ್ಸ್ ಟೆಂಪೋಗೆ ಎತ್ತಿ ಹಾಕುತ್ತಿದ್ದರು. ಅದನ್ನು ನೋಡಿ ನಾವು ಹೋಗುತ್ತಿದ್ದಾಗ ಟೆಂಪೋವನ್ನು ಸ್ಟಾರ್ಟ್ ಮಾಡಿಕೊಂಡು ಎಮ್ಮೆಯನ್ನು ಕೆಳಗೆ ತಳ್ಳಿ ವಾಹನವನ್ನು ಅತಿವೇಗವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಜೀಪಿನ ಬೆಳಕಿನ ಸಹಾಯದಿಂದ ಟೆಂಪೋ ಒಳಗಡೆ ನೋಡಲಾಗಿ 3 ಹಸುಗಳು ಒಂದು ಬಸವ ಇದುದನ್ನು ಕಂಡು ನಾವು ಸಹ ನಮ್ಮ ಪೊಲೀಸ್ ಜೀಪ್ ನೋಡಿ ಒಂದು ಎಮ್ಮೆ ನೂಕಿ ಟೆಂಪೋ ಸಮೇತ ಪರಾರಿಯಾದರು. ನಾವುಗಳು ಹಿಂಭಾಲಿಸಿಕೊಂಡು ಹೋಗುತ್ತಿದ್ದಾಗ ವಾಹನವು ಮೈಸೂರು ಕಡೆ ಅತಿವೇಗವಾಗಿ ಹೋಗುತ್ತಿದ್ದು, ನಾವು ಮೂಕನಹಳ್ಳಿ ಬಳಿ ವಾಹನವನ್ನು ತಡೆದುನಿಲ್ಲಿಸಲು ಪ್ರಯತ್ನ ಪಟ್ಟಾಗ ವಾಹನವನ್ನು ಬಿಡಲು ಬಂದು ನಂತರ ವಾಹನವನ್ನು ಪಕ್ಕಕ್ಕೆ ತೆಗೆದುಕೊಂಡು ಅತಿವೇಗವಾಗಿ ಬನ್ನಿಕುಪ್ಪೆ ಮಾರ್ಗವಾಗಿ ಮೈಸೂರು ಕಡೆ ಹೋಗುತ್ತಿದ್ದಾಗ ಕೆ ಆರ್ ನಗರ ಜಂಕ್ಷನ್ ಬಳಿ ಅಡ್ಡಲಾಗಿ ನಮ್ಮ ಜೀಪಿನ ಮುಂಭಾಗಕ್ಕೆ ಆರೋಪಿಗಳು ಟೆಂಪೋದಲ್ಲಿದ್ದ ಹಸುವನ್ನು ನಮ್ಮ ಜೀಪ್ಗೆ ಅಡ್ಡ ತಳ್ಳಿ ನೂಕಿದರು.

ನಂತರ ಆರೋಪಿತರು ಕೆ.ಆರ್ ನಗರ ಕಡೆ ಓಡಿಸಿಕೊಂಡು ಹೋಗುತ್ತಿದ್ದಾಗ ಚೌಕಹಳ್ಳಿ ಬಳಿ ವಾಹನವನ್ನು ವಾಪಸ್ಸು ಹಿಂದಿರುಗಿಸಿಕೊಂಡು ಬಂದಾಗ ನಾವು ಸಹ ಹಿಂಭಾಲಿಸಿದಾಗ ಹೊಸರಾಮೇನಹಳ್ಳಿ ಲಕ್ಷ್ಮಣ ತೀರ್ಥ ಬ್ರಿಡ್ಜ್ ಬಳಿ ಒಂದು ಹಸುವನ್ನು ನಮ್ಮ ಜೀಪ್ಗೆ ಅಡ್ಡ ತಳ್ಳಿದರು. ನಂತರ ಬೋಳನಹಳ್ಳಿ ಗೇಟ್ ಬಳಿ ಮತ್ತೊಂದು ಹಸುವನ್ನು ಟೆಂಪೋದಿಂದ ತಳ್ಳಿದರು. ಮತ್ತೇ ನಾವು ಹಿಂಭಾಲಿಸಿಕೊಂಡು ಹೋಗುತ್ತಿದ್ದಾಗ ಬಿಳಿಕೆರೆ ಮಲ್ಲಿಗನಾಥಪುರ ಗ್ರಾಮದ ಬಳಿ ಬಸವನನ್ನು ನಮ್ಮ ಜೀಪ್ಗೆ ಅಡ್ಡ ತಳ್ಳಿದರು.

ನಂತರ ಆರೋಪಿತರು ಮೈಸೂರು ಕಡೆ ಹೋಗುತ್ತಿದ್ದಾಗ ಬಿಳಿಕೆರೆ ಬೈಪಾಸ್ ಬಳಿ ನಿಂತಿದ್ದ ಎ.ಎಸ್.ಐ ಚಾಸಾ-34,24 ಅವರುಗಳು ಟೆಂಪೋವನ್ನು ಅಡ್ಡಹಾಕಿದರು ಕೂಡ ನಿಲ್ಲಿಸಿದೆ ಪರಾರಿಯಗುತ್ತಿದ್ದಾಗ ನಾವುಗಳು ಹಿಂಭಾಲಿಸಿ ಹೋಗುತ್ತಿದ್ದಾಗ ಇಲವಾಲ ಪೊಲೀಸ್ ಠಾಣೆ ಸರಹದ್ದು ಸೀಗಳ್ಳಿ ಕಡೆಗೆ ವಾಹನವನ್ನು ಅವರ ಮೇಲೆ ಹತ್ತಿಸಲು ಪ್ರಯತ್ನ ಮಾಡಿ ಹೊರಟು ಹೋದಾಗ ನಾವು ಹಿಂಭಾಲಿಸಿ ಹೋದಾಗ ಇಲವಾಲ ಪೊಲೀಸ್ ಠಾಣೆಗೆ ನಿಸ್ತಂತು ಮೂಲಕ ತಿಳಿಸಿ ಅವರು ಬರುವಷ್ಟರಲ್ಲಿ ಎಳನೀರು ಬೋರೆ ಬಳಿ ಸೀಗಹಳ್ಳಿ ಕಡೆಗೆ ವಾಹನವನ್ನು ತಿರುಗಿಸಿ ನಿರ್ಜನ ಪ್ರದೇಶದಲ್ಲಿ ಬಿಟ್ಟು ಕತ್ತಲಲ್ಲಿ ಯಲ್ಲಿ 4 ಜನ ಆರೋಪಿತರು ಓಡಿಹೋದರು. ಜೀಪಿನ ಬೆಳಕಿನ ಸಹಾಯದಿಂದ ಒಬ್ಬ ಆರೋಪಿ ಅಖಿಲ್ ಎಂಬುವವನ್ನು ನೋಡಿರುತ್ತೇವೆ. ಆತ ಶಬ್ಬೀರ್ ನಗರದ ನಿವಾಸಿ ಎಂದು ಗೊತ್ತಾಗಿರುತ್ತದೆ.

ನಂತರ ಅಲ್ಲಿಗೆ ಚಾಸಾ-34, 24, 33, 31, ರವರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ಸ್ಥಳ ಮಹಜರ್ ಮಾಡಿ ವಾಹನದ ಹಿಂಭಾಗದಲ್ಲಿ ಇದ್ದ 3 ಅಡಿಯ ಎರಡು ಸರಳುಗಳು ಮತ್ತು ವಾಹನ ಸಂ. ಕೆಎಲ್-11 ಎಲ್-8307 ಅನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡು ನಂತರ ಹುಣಸೂರು ಪಟ್ಟಣ ಠಾಣೆಗೆ ಹಾಜರಾಗಿ ವರದಿಯನ್ನು ಠಾಣಾಧಿಕಾರಿಗೆ ಸಲ್ಲಿಸಿರುತ್ತೇನೆ. ಘಟನಾ ಸ್ಥಳದ ಪಂಚನಾಮೆ ಬೆಳಿಗ್ಗೆ 3-4 ಗಂಟೆ ವರೆಗೆ ಜರುಗಿಸಿರುತ್ತೇನೆ.

ಸ್ಥಳ ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು ಮೂಲ ಸಿ.ಸಿ.306/2015 ರಲ್ಲಿ ಗುರುತಿಸಲಾಗಿದೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಸದರಿ ಮೂಲ ಪ್ರಕರಣದಲ್ಲಿ ಗುರುತಿಸಲಾಗಿದೆ.

ಕಬ್ಬಿಣದ ಎರಡು ರಾಡನ್ನು ಸಾಕ್ಷಿ ನೋಡಿ ಗುರುತಿಸಿದ್ದು ಚಿಕ್ಕ ರಾಡನ್ನು ಮು.ಮಾ-1 ಹಾಗೂ ಉದ್ದ ರಾಡನ್ನು ಮು.ಮಾ-2 ಎಂದು ಮೂಲ ಸಿ.ಸಿ.306/2015 ರಲ್ಲಿ ಗುರುತಿಸಲಾಗಿದೆ. ಈ ಬಗ್ಗೆ

ನಾನು ಮರುಹೇಳಿಕೆ ನೀಡಿರುತ್ತೇನೆ. ಸದರಿ ಮರುಹೇಳಿಕೆಯನ್ನು ನಿಪಿ.4 ಎಂದು ಮೂಲ ಸಿ.ಸಿ.306/2015 ರಲ್ಲಿ ಗುರುತಿಸಲಾಗಿದೆ.

ದಿಃ 03.01.2014 ರಂದು ಕೃತ್ಯ ಸ್ಥಳಕ್ಕೆ ಚಾಸಾ–38 ರವರು ನಮ್ಮನ್ನು ಕರೆದುಕೊಂಡು ಹೋಗಿದ್ದು, ಚಿಕ್ಕ ಹುಣಸೂರಿನ ಬಳಿ ಹಸು ತುಂಬುತ್ತಿದ್ದ ಜಾಗವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಸ್ಥಳಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಮೂಲ ಸಿ.ಸಿ.306/2015 ರಲ್ಲಿ ಗುರುತಿಸಲಾಗಿದೆ. ನಂತರ ಬನ್ನಿಕುಪ್ಪೆ ಮಾರ್ಗ ಕೆ.ಆರ್.ನಗರ ಜಂಕ್ಷನ್ ಬಳಿ ಮತ್ತೊಂದು ಹಸು ತಳ್ಳಿದ ಜಾಗವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ನಿಪಿ.5 ರಂತೆ ಜರುಗಿಸಿರುತ್ತಾರೆ. ಮುಂದುವರಿದ ಬೋಳನ ಹಳ್ಳಿ ಗೇಟಿನ ಬಳಿ ಮತ್ತೊಂದು ಹಸು ತಳ್ಳಿದ ಜಾಗವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ನಿಪಿ.5 ರಂತೆ ಜರುಗಿಸಿರುತ್ತಾರೆ. ಹೊಸರಾಮನಹಳ್ಳಿ ಲಕ್ಷ್ಮಣ ತೀರ್ಥ ನದಿ ಬಳಿ ಮತ್ತೊಂದು ಹಸುವನ್ನು ವಾಹನದಿಂದ ತಳ್ಳಿದ ಜಾಗವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ನಿಪಿ.5 ರಂತೆ ಜರುಗಿಸಿರುತ್ತಾರೆ. ನಂತರ ವಾಪಸ್ಸು ಮಲ್ಲಿನಾಥ ಪುರ ಬಸವನನ್ನು ತಳ್ಳಿದ ಜಾಗವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ನಿಪಿ.5 ರಂತೆ ಜರುಗಿಸಿರುತ್ತಾರೆ. ಮುಂದುವರಿದು ಬಿಳಿಕೆರೆ ಬೈಪಾಸ್ ರಸ್ತೆ ಬಸ್ ಸ್ಟಾಂಡ್ ಬಳಿ ಪೊಲೀಸರ ಮೇಲೆ ವಾಹನವನ್ನು ಹತ್ತಿಸಿ ಹೋಗಲು ಬ್ಯಾರೀಕೇಡ್ ಗೆ ಡಿಕ್ಕಿ ಪಡಿಸಿದ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಚಾಸಾ–38 ರವರು ಸ್ಥಳ ಮಹಜರ್ ನಿಪಿ.5 ರಂತೆ ಜರುಗಿಸಿರುತ್ತಾರೆ. ಸದರಿ ನಿಪಿ.5 ಮಹಜರ್ ಅನ್ನು ಬೆಳಿಗ್ಗೆ 6.45 ಗಂಟೆಯಿಂದ 12.30 ರವರೆಗೆ ಜರುಗಿಸಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನೀಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.